KABC030511882024

**ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,**
**ಬೆಂಗಳೂರು ನಗರ**

ಉಪಸ್ಥಿತರು

**ಶ್ರೀ ರಂಗೇಗೌಡ .ಸಿ**

ಬಿ.ಎ.ಎಲ್ಎಲ್. ಎಲ್ಎಲ್.ಬಿ.,
ಮುಖ್ಯ ನ್ಯಾಯಿಕ ದಂಡಾಧಿಕಾರಿ,
ಬೆಂಗಳೂರು ನಗರ

**10 ನೇ ತಾರೀಖು ಮಾರ್ಚ್ 2026**

**ಸಿಸಿ ಸಂಖ್ಯೆ– 29930/2024**

**ದೂರುದಾರರು** : ರಾಜ್ಯದ ಪರ ಬೊಮ್ಮನಹಳ್ಳಿ ಪೊಲೀಸ್ ಠಾಣೆ
ಬೆಂಗಳೂರು ನಗರ
(ಹಿ.ಸ.ಸ. ಅಭಿಯೋಜಕರು)

**– ವಿರುದ್ಧ –**

**ಆರೋಪಿಗಳು:** 1. ದಿಲೀಪ್ ಬಿನ್ ಲೋಕೇಶ್ವರಪ್ಪ,
28 ವರ್ಷ, ನಂ.5, 4ನೇ ಮುಖ್ಯರಸ್ತೆ
1ನೇ ಕ್ರಾಸ್, ಬಾಲಾಜಿ ಲೇಔಟ್
ಹೊಂಗಸಂದ್ರ, ಬೆಂಗಳೂರು – 560 068

2. ಅಕಿಲೇಶ್ ಅಃ ಗುಂಡ ಬಿನ್ ರಮೇಶ
21 ವರ್ಷ, ನಂ.16, 4ನೇ ಮುಖ್ಯರಸ್ತೆ
1ನೇ ಕ್ರಾಸ್, ಬಾಲಾಜಿ ಲೇಔಟ್
ಹೊಂಗಸಂದ್ರ, ಬೆಂಗಳೂರು – 560 068

3. ಸಾಗರ್ ಬಿನ್ ಕೃಷ್ಣ
26 ವರ್ಷ, ನಂ.58, 5ನೇ ಕ್ರಾಸ್
ಪ್ರೆಸಿಡೆನ್ಸಿ ಸ್ಕೂಲ್ ಹತ್ತಿರ, ವಿರಾಟ್ ನಗರ
ಬೊಮ್ಮನಹಳ್ಳಿ, ಬೆಂಗಳೂರು – 560 068

4. ಸಮೀರ್ ಬಿನ್ ಮಹಮ್ಮದ್ ಬಿಲಾಲ
22 ವರ್ಷ, ನಂ.294, 5ನೇ ಕ್ರಾಸ್
ವಿಶ್ವೇಶ್ವರಯ್ಯ ಮೈನ್ ರೋಡ್, ಕ್ಯಾಮ್ ಹತ್ತಿರ
ಬೊಮ್ಮನಹಳ್ಳಿ, ಬೆಂಗಳೂರು – 560 068

(ಶ್ರೀ.ಪ್ರಸನ್ನ ಕುಮಾರ್ ಎಂ ಬಿ ವಕೀಲರು)

**ದಂಡ ಪ್ರಕ್ರಿಯಾ ಸಂಹಿತೆ ಕಲಂ 355 ರಡಿ ವಿವರ**

| | | |
|---|---|---|
| ಅಪರಾಧದ ದಿನಾಂಕ | :- | 21/07/2024 |
| ಫಿರ್ಯಾದಿ ಮಾಡಲಾದ ಅಪರಾಧಗಳು | :- | ಕಲಂ 118(2), 115(2), 126, 352, 3(5) ಬಿಎನ್‌ಎಸ್ |
| ಆರೋಪಿ/ಗಳು ಆರೋಪಗಳನ್ನು ಒಪ್ಪಿಕೊಂಡಿದ್ದಾರೆಯೇ | :- | ಇಲ್ಲ |
| ಅಂತಿಮ ಆದೇಶ | :- | 1 ರಿಂದ 4ನೇ ಆರೋಪಿಗಳನ್ನು ಖುಲಾಸೆಗೊಳಿಸಿದೆ |
| ತೀರ್ಪಿನ ದಿನಾಂಕ | :- | 10/03/2026 |

**– ತೀರ್ಪು –**

ಬೆಂಗಳೂರು ನಗರದ ಬೊಮ್ಮನಹಳ್ಳಿ ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ಆರೋಪಿ ವಿರುದ್ಧ ಕಲಂ ಕಲಂ 118(2), 115(2), 126, 352, 3(5) ಬಿಎನ್‌ಎಸ್ ರಡಿ ದಂಡನೀಯ ಅಪರಾಧ ಮಾಡಿದ್ದಾರೆಂದು ಆರೋಪಿಸಿ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

**2.** ಅಭಿಯೋಜನೆಯ ಪ್ರಕರಣದ ಸಾರಾಂಶವೇನೆಂದರೆ ಚಾಸಾ 1 ರವರು ಅವರ ಸ್ನೇಹಿತರೊಂದಿಗೆ ಕೂರ್ಗ್ ಹೋಟೇಲ್‌ನಲ್ಲಿ ಇರುವಾಗ ಅಲ್ಲಿ ಇದ್ದಂತಹ 2ನೇ ಆರೋಪಿಯು ಚಾಸಾ 1 ರವರಿಗೆ ನಿನ್ನನ್ನು ಎಲ್ಲಿಯೋ ನೋಡಿದ್ದೇನೆ ಎಂದಾಗ ಚಾಸಾ 1 ರವರು ಇಲ್ಲಿ ಎಲ್ಲಿಯೋ ನೋಡಿರುತ್ತೀಯಾ ಎಂದು ಹೇಳಿರುತ್ತಾರೆ. ಆಗ 2ನೇ ಆರೋಪಿಯು ನಿನಗೆ ದಿಲೀಪ್ ಗೊತ್ತಾ ಎಂದಿದ್ದು ಅದಕ್ಕೆ ಚಾಸಾ 1 ರವರು ದಿಲೀಪ್ ಗೊತ್ತು, ಅವರ ಅಪ್ಪ ಲೋಕಣ್ಣನು ಗೊತ್ತು ಎಂದು ಹಗುರವಾಗಿ ಮಾತನಾಡಿರುತ್ತಾನೆ. ಈ ವಿಚಾರವನ್ನು 2ನೇ ಆರೋಪಿಯು 1ನೇ ಆರೋಪಿಗೆ ತಿಳಿಸಿದ್ದು, 1 ರಿಂದ 4ನೇ ಆರೋಪಿಗಳು ಚಾಸಾ 1 ರವರ ಮೇಲೆ ಹಗೆ ಸಾಧಿಸಿರುತ್ತಾರೆ. ದಿನಾಂಕ 20-07-2024 ರಂದು 1ನೇ ಆರೋಪಿಯು ಚಾಸಾ 4 ರವರಿಗೆ ಕರೆ ಮಾಡಿ ಚಾಸಾ 1 ರವರ ಮೊಬೈಲ್ ನಂಬರ್ ನೀಡುವಂತೆ ಕೇಳಿದ್ದು ಚಾಸಾ 4 ರವರು 1ನೇ ಆರೋಪಿ ಮತ್ತು ಚಾಸಾ 1 ರವರಿಗೆ ಸಂಧಾನ ಮಾಡಿಸಲು ತಮ್ಮ ಕಛೇರಿಯ ಬಳಿ ಬರುವಂತೆ

ತಿಳಿಸಿರುತ್ತಾನೆ. ಅದರಂತೆ ರಾತ್ರಿ ಸುಮಾರು 10.15 ಗಂಟೆಗೆ ಸಮಯದಲ್ಲಿ ಚಾಸಾ 1, 4 ರಿಂದ 6 ರವರು ಬೊಮ್ಮನಹಳ್ಳಿಯ ಹೊಂಗಸಂದ್ರದ ಬಾಲಾಜಿ ಲೇಔಟ್ ನ 9ನೇ ಕ್ರಾಸ್‌ನ ಪ್ರಭಾವತಿ ಮೇಘನಾ ಅಪಾರ್ಟಮೆಂಟ್ ಎದುರುಗಡೆ ಇರುವಂತಹ ನಂ.54 ರ ಬಿಸಿಎಸ್ ಸೆಂಟರ್ ಪ್ರೈಸಸ್ ಕಛೇರಿ ಬಳಿ ನಿಂತುಕೊಂಡಿರುವಾಗ ಅಲ್ಲಿಗೆ ಬಂದಂತಹ 1 ರಿಂದ 4ನೇ ಆರೋಪಿಗಳಲ್ಲಿ 1ನೇ ಆರೋಪಿಯು 2ನೇ ಆರೋಪಿಗೆ ಸುಧಾಕರ್ ಯಾರೆಂದು ಕೇಳಿದ್ದು 2ನೇ ಆರೋಪಿಯು ಚಾಸಾ 1 ರವರನ್ನು ತೋರಿಸಿರುತ್ತಾನೆ. ಆಗ 1ನೇ ಆರೋಪಿಯು ಚಾಸಾ 4 ರವರನ್ನು ತಳ್ಳಿ ಚಾಸಾ 1 ರವರನ್ನು ಚಾಸಾ 4 ರವರಿಗೆ ಸೇರಿದ ಬಿಸಿಎಸ್ ಎಂಟರ್ ಪ್ರೈಸ್ ಕಛೇರಿಯ ಒಳಗಡೆ ಎಳೆದುಕೊಂಡು ಹೋಗಿ ನಿನ್ನಮ್ಮನ್ ನನ್ನ ತಂದೆಗೆ ಎಣ್ಣೆ ಕುಡಿಸ್ತಿಯೇನೋ ತಿರಬೋಕಿ ನನ್ನ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದು ಕೈಯಿಂದ ಮುಖಕ್ಕೆ ಗುದ್ದಿರುತ್ತಾನೆ. 2ನೇ ಆರೋಪಿಯು ಟೇಬಲ್ ಮೇಲಿದ್ದ ಪೆನ್ ಸ್ಟ್ಯಾಂಡ್‌ನಿಂದ ಬಲಕಿವಿಯ ಬಳಿ ಹೊಡೆದಿರುತ್ತಾನೆ. 1ನೇ ಆರೋಪಿಯು ಚಾಸಾ 1 ರವರ ಬಟ್ಟೆ ತೆಗೆದು ಗೋಡೆ ಮೇಲಿದ್ದ ಆನೆ ಸೊಂಡಲಿರುವ ಫೋಟೋ ತೆಗೆದುಕೊಂಡು ಮುಖದ ಮೇಲೆ ಹೊಡೆದಿರುತ್ತಾನೆ. 2ನೇ ಆರೋಪಿಯು ನೀರಿನ ಬಾಟಲ್‌ನಿಂದ ಚಾಸಾ 1 ರವರ ಮೇಲೆ ಹಲ್ಲೆ ಮಾಡಿದ್ದು 3 ಮತ್ತು 4ನೇ ಆರೋಪಿಗಳು ಚಾಸಾ 1 ರವರಿಗೆ ಕೈಯಿಂದ ಹಲ್ಲೆ ಮಾಡಿ ಕಾಲಿನಿಂದ ಒದ್ದಿರುತ್ತಾರೆ. ಅಲ್ಲಿಯೇ ಇದ್ದಂತಹ ಚಾಸಾ 4 ರಿಂದ 6 ರವರು ಜಗಳ ಬಿಡಿಸಲು ಹೋಗಿದ್ದು ಆಗ 3

ಮತ್ತು 4ನೇ ಆರೋಪಿಗಳು ಚಾಸಾ 4 ರವರನ್ನು ಅಡ್ಡಗಟ್ಟಿ ಹಿಡಿದುಕೊಂಡಿರುತ್ತಾರೆ. ಆಗ ಚಾಸಾ 4 ರವರು ವಿಡಿಯೋ ಮಾಡಲು ತಿಳಿಸಿದ್ದು 1 ರಿಂದ 4ನೇ ಆರೋಪಿಗಳು ಎಲ್ಲಾರೂ ಅಲ್ಲಿಂದ ಓಡಿ ಹೋಗಿರುತ್ತಾರೆಂದು ಚಾಸಾ.1 ರವರು ಬೊಮ್ಮನಹಳ್ಳಿ ಪೊಲೀಸ್ ಠಾಣೆಗೆ ಪ್ರಥಮ ಮಾಹಿತಿ ನೀಡಿರುತ್ತಾರೆ. ಅದನ್ನು ಸ್ವೀಕರಿಸಿದ ಠಾಣಾಧಿಕಾರಿಗಳು ಮೊಕದ್ದಮೆ ಸಂಖ್ಯೆ.277/2024 ನ್ನು ದಾಖಲಿಸಿರುತ್ತಾರೆ.

**3.** ನಂತರ ತನಿಖಾಧಿಕಾರಿಯವರು ಪ್ರಕರಣದ ಸಂಪೂರ್ಣ ತನಿಖೆ ಕೈಗೊಂಡು 1 ರಿಂದ 4ನೇ ಆರೋಪಿಗಳ ವಿರುದ್ಧ ಮೇಲ್ಕಂಡ ಆರೋಪಗಳಿಗೆ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿರುತ್ತಾರೆ. 1 ರಿಂದ 4ನೇ ಆರೋಪಿಗಳ ವಿರುದ್ಧ ಆಪಾದಿಸಿದ ಆರೋಪಗಳಿಗೆ ಸಂಜ್ಞೆ ತೆಗೆದುಕೊಂಡು ಸದರಿ ನ್ಯಾಯಾಲಯವು ಸಮನ್ಸ್ ಹೊರಡಿಸಿರುತ್ತದೆ. ಸಮನ್ಸ್ ಗನುಗುಣವಾಗಿ 1 ರಿಂದ 4ನೇ ಆರೋಪಿಗಳು ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ವಕೀಲರ ಮೂಲಕ ಸೂಕ್ತ ಅರ್ಜಿ ಸಲ್ಲಿಸಿ ಜಾಮೀನು ಪಡೆದುಕೊಂಡಿರುತ್ತಾರೆ.

**4**. ಅಂತಿಮ ವರದಿಯ ಪ್ರತಿಯನ್ನು ಆರೋಪಿಗೆ ದಂ.ಪ್ರ.ಸಂ. ಕಲಂ 207 ರಡಿಯಲ್ಲಿ ನೀಡಲಾಯಿತು. ಉಭಯ ಪಕ್ಷಗಾರರ ವಾದ ಆಲಿಸಿದ ನಂತರ 1 ರಿಂದ 4ನೇ ಆರೋಪಿಗಳ ವಿರುದ್ಧದ ಅಪರಾಧಗಳಿಗಾಗಿ ದೋಷಾರೋಪಣೆಯನ್ನು ರಚಿಸಿ,

ಓದಿ ವಿವರಿಸಲಾಗಿ, 1 ರಿಂದ 4ನೇ ಆರೋಪಿಗಳು ಅದನ್ನು ನಿರಾಕರಿಸಿ ವಿಚಾರಣೆ ಆಗಬೇಕೆಂದು ಕೋರಿದ ಪ್ರಯುಕ್ತ ಪ್ರಕರಣವನ್ನು ವಿಚಾರಣೆಗೆ ನಿಗದಿಪಡಿಸಲಾಗಿರುತ್ತದೆ.

**5.** ಅಭಿಯೋಜನೆಯು 1 ರಿಂದ 4ನೇ ಆರೋಪಿಗಳ ವಿರುದ್ಧ ಮಾಡಿದ ಆರೋಪಣೆಗಳನ್ನು ಸಾಬೀತುಪಡಿಸಲು ತಮ್ಮ ಪರವಾಗಿ ಚಾಸಾ.1–ಸುಧಾಕರ್ ರವರನ್ನು ಪ್ರಾ.ಸಾ.1 ಎಂದು ವಿಚಾರಣೆ ಮಾಡಿ ನಿಪಿ 1 ರಿಂದ 3 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಘಟನೆಯಲ್ಲಿ ನೊಂದ ಮತ್ತೊಬ್ಬ ವ್ಯಕ್ತಿ ಚಾಸಾ 4 ರವರಿಗೆ ಪ್ರೊಕ್ಲಮೇಷನ್ ಹೊರಡಿಸಿದರೂ ಸಹ ಅಭಿಯೋಜನೆಯವರು ಚಾಸಾ 4 ರವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ವಿಫಲರಾಗಿದ್ದರಿಂದ ಸದರಿಯವರನ್ನು ವಿಚಾರಣೆಯಿಂದ ಕೈ ಬಿಡಲಾಯಿತು. ವಿಚಾರಣೆ ಮಾಡಲಾದ ಪ್ರಾ.ಸಾ.1 ರವರು ಅಭಿಯೋಜನೆ ಪ್ರಕರಣವನ್ನು ಬೆಂಬಲಿಸದೆ ಪ್ರತಿಕೂಲ ಸಾಕ್ಷ್ಯ ನುಡಿದಿರುವುದರಿಂದ ಉಳಿದ ಸಾಕ್ಷಿದಾರರ ವಿಚಾರಣೆ ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲವೆಂದು ಪರಿಗಣಿಸಿ ಅಭಿಯೋಜನೆಯವರ ಮನವಿಯನ್ನು ತಿರಸ್ಕರಿಸಿ ಉಳಿದ ಸಾಕ್ಷಿದಾರರನ್ನು ವಿಚಾರಣೆಯಿಂದ ಕೈಬಿಟ್ಟು ಅಭಿಯೋಜನೆಯ ಸಾಕ್ಷ್ಯವನ್ನು ಮುಕ್ತಾಯಗೊಳಿಸಿದೆ.

**6.** ಫ್ರಾ.ಸಾ.1 ರವರ ಸಾಕ್ಷ್ಯವನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ಅದರಲ್ಲಿ 1 ರಿಂದ 4ನೇ ಆರೋಪಿಗಳು ತಪ್ಪಿತಸ್ಥರೆಂದು ಕಾಣಿಸುವ ಯಾವುದೇ ಅಂಶಗಳು ಗೋಚರಿಸದ ಹಿನ್ನೆಲೆಯಲ್ಲಿ 1 ರಿಂದ 4ನೇ ಆರೋಪಿಗಳನ್ನು ದಂ.ಪ್ರ.ಸಂ.ಕಲಂ.313 ರಡಿ ಹೇಳಿಕೆಯನ್ನು ದಾಖಲಿಸುವುದರಿಂದ ವಿನಾಯತಿ ನೀಡಲಾಗಿದೆ.

**7.** ಉಭಯ ಪಕ್ಷಗಾರರ ಪರ ವಾದವನ್ನು ಆಲಿಸಲಾಯಿತು. ನ್ಯಾಯಾಲಯದಲ್ಲಿ ಲಭ್ಯವಿರುವ ಸಾಕ್ಷ್ಯಾಧಾರಗಳನ್ನು ಮತ್ತು ಕಡತವನ್ನು ಪರಿಶೀಲನೆ ಮಾಡಿದ ನಂತರ ಪರಿಗಣನೆಗೆ ಈ ಕೆಳಗಿನ ಅಂಶಗಳು ಉದ್ಭವಿಸಿವೆಃ

1. ದಿನಾಂಕ 20-07-2024 ರಂದು ರಾತ್ರಿ ಸುಮಾರು 10.15 ಗಂಟೆಯ ಸಮಯದಲ್ಲಿ ಬೊಮ್ಮನಹಳ್ಳಿಯ ಹೊಂಗಸಂದ್ರದ ಬಾಲಾಜಿ ಲೇಔಟ್‌ನ 9ನೇ ಕ್ರಾಸ್ ನ ಪ್ರಭಾವತಿ ಮೇಘನಾ ಅಪಾರ್ಟಮೆಂಟ್ ಎದುರುಗಡೆ ಇರುವಂತಹ ನಂ.54 ರ ಬಿಸಿಎಸ್ ಎಂಟರ್ ಪ್ರೈಸಸ್ ಕಛೇರಿ ಬಳಿ ಚಾಸಾ 1, 4 ರಿಂದ 6 ರವರು ನಿಂತುಕೊಂಡಿರುವಾಗ 1 ರಿಂದ 4ನೇ ಆರೋಪಿಗಳು ಸಮಾನ ಉದ್ದೇಶದಿಂದ ಅಲ್ಲಿಗೆ ಬಂದು, 1ನೇ ಆರೋಪಿಯಾದ ಚಾಸಾ 4 ರವರನ್ನು ತಳ್ಳಿ ಚಾಸಾ 1 ರವರನ್ನು ಚಾಸಾ 4 ರವರಿಗೆ ಸೇರಿದ ಬಿಸಿಎಸ್ ಎಂಟರ್ ಪ್ರೈಸಸ್ ಕಛೇರಿಯ ಒಳಗೆಡೆ ಎಳೆದುಕೊಂಡು ಹೋಗಿ ನಿನ್ನಮ್ಮನ್ ನನ್ನ ತಂದೆಗೆ ಎಣ್ಣೆ ಕುಡಿಸ್ತಿಯೇನೋ ತಿರಬೋಕಿ ನನ್ನ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದು, ಶಾಂತಿ ಭಂಗವನ್ನು ಪ್ರಚೋದಿಸುವ ಉದ್ದೇಶದಿಂದ ಉದ್ದೇಶಪೂರ್ವಕವಾಗಿ ಅವಮಾನ ಮಾಡಿದ್ದು, ಆ ಮೂಲಕ ಬಿಎನ್‌ಎಸ್ 352 ಸಹವಾಚಕ ಕಲಂ 3/5

ರಡಿ ಅಪರಾಧವನ್ನೆಸಗಿದ್ದಾರೆಂದು ಅಭಿಯೋಜನೆಯು ನಿಸ್ಸಂಶಯವಾಗಿ ರುಜುವಾತು ಪಡಿಸಿದ್ದಾರೆಯೆ?

2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 4ನೇ ಆರೋಪಿಗಳಾದ ನೀವು ಸಮಾನ ಉದ್ದೇಶ ಹೊಂದಿದ್ದು, ಚಾಸಾ 1 ರವರಿಗೆ 1ನೇ ಆರೋಪಿ ಕೈಯಿಂದ ಮುಖಕ್ಕೆ ಗುದ್ದಿದ್ದು, 3 ಮತ್ತು 4ನೇ ಆರೋಪಿಗಳು ಚಾಸಾ 1 ರವರಿಗೆ ಕೈಯಿಂದ ಹಲ್ಲೆ ಮಾಡಿ ಕಾಲಿನಿಂದ ಒದ್ದು ನೋವುಂಟು ಮಾಡಿದ್ದು, ಆ ಮೂಲಕ ಬಿಎನ್‌ಎಸ್ 115(2) ಸಹವಾಚಕ ಕಲಂ 3/5 ರಡಿ ಅಪರಾಧವನ್ನೆಸಗಿದ್ದಾರೆಂದು ಅಭಿಯೋಜನೆಯು ನಿಸ್ಸಂಶಯವಾಗಿ ರುಜುವಾತು ಪಡಿಸಿದ್ದಾರೆಯೆ?

3. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 4ನೇ ಆರೋಪಿಗಳು ಸಮಾನ ಉದ್ದೇಶ ಹೊಂದಿದ್ದು, ಚಾಸಾ 1 ರವರಿಗೆ 2ನೇ ಆರೋಪಿ ಟೇಬಲ್ ಮೇಲಿದ್ದ ಪೆನ್ ಸ್ಟ್ಯಾಂಡ್‌ನಿಂದ ಬಲಕಿವಿಯ ಬಳಿ ಹೊಡೆದಿದ್ದು, 1ನೇ ಆರೋಪಿ ಚಾಸಾ 1 ರವರ ಬಟ್ಟೆ ತೆಗೆದು ಗೋಡೆ ಮೇಲಿದ್ದ ಆನೆ ಸೊಂಡಿಲಿರುವ ಫೋಟೋ ತೆಗೆದುಕೊಂಡು ಮುಖದ ಮೇಲೆ ಹೊಡೆದಿದ್ದು, 2ನೇ ಆರೋಪಿ ನೀರಿನ ಬಾಟಲ್ ನಿಂದ ಚಾಸಾ 1 ರವರ ಮೇಲೆ ಹಲ್ಲೆ ಮಾಡಿದ್ದು, ಈ ಕೃತ್ಯದಿಂದ ಚಾಸಾ 1 ರವರ ಹಲ್ಲು ಮುರಿದು ಹೋಗಿ ತೀವ್ರ ಸ್ವರೂಪದ ಗಾಯಗಳಾಗಿದ್ದು, ಆ ಮೂಲಕ ಬಿಎನ್‌ಎಸ್ 118(2) ಸಹವಾಚಕ ಕಲಂ 3/5 ಅಪರಾಧವನ್ನೆಸಗಿದ್ದಾರೆಂದು ಅಭಿಯೋಜನೆಯು ನಿಸ್ಸಂಶಯವಾಗಿ ರುಜುವಾತು ಪಡಿಸಿದ್ದಾರೆಯೆ?

4. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 4ನೇ ಆರೋಪಿಗಳು ಸಮಾನ ಉದ್ದೇಶ ಹೊಂದಿದ್ದು, 3 ಮತ್ತು 4ನೇ ಆರೋಪಿಗಳು ಚಾಸಾ 4 ರವರನ್ನು ಅಡ್ಡಗಟ್ಟಿ ಹಿಡಿದುಕೊಂಡು ಅಕ್ರಮ ಪ್ರತಿಬಂಧ ಉಂಟು ಮಾಡಿದ್ದು, ಆ ಮೂಲಕ ಬಿಎನ್ಎಸ್ 126 ಸಹವಾಚಕ ಕಲಂ 3/5 ರಡಿ ಅಪರಾಧವನ್ನೆಸಗಿದ್ದಾರೆಂದು ಅಭಿಯೋಜನೆಯು ನಿಸ್ಸಂಶಯವಾಗಿ ರುಜುವಾತು ಪಡಿಸಿದ್ದಾರೆಯೆ

5. ಏನು ಆದೇಶ?

**8.** ಅಭಿಯೋಜನೆಯವರು ನ್ಯಾಯಾಲಯಕ್ಕೆ ಹಾಜರುಪಡಿಸಿದ ಸಾಕ್ಷ್ಯಗಳ ಆಧಾರದ ಮೇಲೆ ಮೇಲ್ಕಂಡ ಅಂಶಗಳನ್ನು ಈ ಕೆಳಗಿನಂತೆ ಉತ್ತರಿಸುತ್ತೇನೆ.

ಅಂಶ 1 : ನಕಾರಾತ್ಮಕವಾಗಿ

ಅಂಶ 2 : ನಕಾರಾತ್ಮಕವಾಗಿ

ಅಂಶ 3 : ನಕಾರಾತ್ಮಕವಾಗಿ

ಅಂಶ 4 : ನಕಾರಾತ್ಮಕವಾಗಿ

ಅಂಶ 5 : ಅಂತಿಮ ಆದೇಶದಂತೆ ಈ ಕೆಳಗಿನ

## ಕಾ ರ ಣ ಗ ಳಿ ಗಾ ಗಿ

**9. ಅಂಶ.1 ರಿಂದ 4:** ಈ ಎಲ್ಲಾ ಅಂಶಗಳು ಪರಸ್ಪರ ಹೊಂದಿಕೊಂಡಿರುವುದರಿಂದ, ಅದಕ್ಕೆ ಸಂಬಂಧಿಸಿದ ಸಂಗತಿ ಮತ್ತು ಸಾಕ್ಷ್ಯದ ಪುನರಾವರ್ತನೆಯನ್ನು ತಡೆಗಟ್ಟುವ ಸಲುವಾಗಿ ಅವುಗಳ ಚರ್ಚೆಯನ್ನು ಒಟ್ಟಾಗಿ ತೆಗೆದುಕೊಳ್ಳಲಾಗಿದೆ.

10. ಅಭಿಯೋಜನೆಯು ತಮ್ಮ ಪ್ರಕರಣವನ್ನು ರುಜುವಾತುಪಡಿಸಲು ಚಾಸಾ 1 ಸುಧಾಕರ್ ರವರನ್ನು ಫ್ರಾಸಾ.1 ಎಂದು ವಿಚಾರಣೆಗೊಳಪಡಿಸಿದೆ. ಅವರು ತಮ್ಮ ಸಾಕ್ಷ್ಯದಲ್ಲಿ ಆರೋಪಿತರು ತನ್ನ ಸ್ನೇಹಿತರು. 1ನೇ ಆರೋಪಿಯು ತನಗೆ ಹಣ ಕೊಡಬೇಕಾಗಿತ್ತು. 2024 ರಲ್ಲಿ ತಾನು 1ನೇ ಆರೋಪಿಯ ಬಳಿ ಹೋಗಿ ತಾನು ಹಣ ಕೇಳಿದ್ದೇನೆ, ಆ ಸಮಯದಲ್ಲಿ 1 ರಿಂದ 4ನೇ ಆರೋಪಿತರು ಮತ್ತು ತನ್ನ ಮಧ್ಯದಲ್ಲಿ ಬಾಯಿ ಮಾತಿಗೆ ಮಾತು ಆಗಿರುತ್ತದೆ. 1ನೇ ಆರೋಪಿ ತನಗೆ ಹಣ ಕೊಡಲಿಲ್ಲವೆಂದು ಹೋಗಿ ತಾನು ಪೋಲೀಸರಿಗೆ ತಿಳಿಸಿದ್ದೇನೆ. ಪೋಲೀಸರು ಒಂದು ದಾಖಲೆಗೆ ತನ್ನ ಸಹಿ ಪಡೆದುಕೊಂಡಿರುತ್ತಾರೆ. ಅದರಲ್ಲಿ ಏನು ಬರೆದಿದೆ ಎಂದು ತನಗೆ ಗೊತ್ತಿಲ್ಲ. ಪೆನ್ ಸ್ಟ್ಯಾಂಡ್, ಫೋಟೋ ಫ್ರೇಮ್ ಮತ್ತು ವಾಟರ್ ಬಾಟಲನ್ನು ತಾನು ಪೋಲೀಸರ ಮುಂದೆ ಹಾಜರುಪಡಿಸಿಲ್ಲ ಮತ್ತು ಪೋಲೀಸರು ಯಾವುದೇ ಪಂಚನಾಮೆ ತನ್ನ ಸಮಕ್ಷಮ ಮಾಡಿಲ್ಲ. ನಿಪಿ 2 ರ ಮೇಲಿರುವ ಸಹಿಯನ್ನು ಪೋಲೀಸ್ ಠಾಣೆಯಲ್ಲಿ ಎರಡು ದಿನಗಳ ನಂತರ ಮಾಡಿರುತ್ತೇನೆ. ನಿಪಿ 1 ಮತ್ತು 2 ರಲ್ಲಿ ಏನು ಬರೆದಿದೆ ಎಂದು ತನಗೆ ಗೊತ್ತಿಲ್ಲ. ಆರೋಪಿತರು ಪೆನ್ ಸ್ಟ್ಯಾಂಡ್, ಫೋಟೋ ಫ್ರೇಮ್ ಮತ್ತು ವಾಟರ್ ಬಾಟಲ್ ನಿಂದ ತನಗೆ ಹಲ್ಲೆ ಮಾಡಿಲ್ಲ, ತನಗೆ ಆರೋಪಿತರು ಹಲ್ಲೆ ಮಾಡಿದ್ದರಿಂದ ತನಗೆ ಹಲ್ಲು ಮುರಿದಿರಲಿಲ್ಲ. ಆರೋಪಿತರು ತನಗೆ ಕೊಲೆ ಬೆದರಿಕೆ ಹಾಕಲಿಲ್ಲ ಎಂದು ಅಭಿಯೋಜನೆ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದಾರೆ.

11. ಪ್ರಾಜ್ಞ ಹಿ.ಸ.ಸ.ಅಭಿಯೋಜಕರು ಪ್ರಾಸಾ.1 ರವರನ್ನು ಪ್ರತಿಕೂಲ ಸಾಕ್ಷಿಗಳೆಂದು ಪರಿಗಣಿಸಿ ಪಾಟೀ ಸವಾಲಿಗೆ ಒಳಪಡಿಸಿರುತ್ತಾರೆ. ಅವರು ತಮ್ಮ ಪಾಟೀ ಸವಾಲಿನಲ್ಲಿ ಅಭಿಯೋಜಕರು ಮಾಡಿದ ಎಲ್ಲಾ ಸಲಹೆಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ. ಪ್ರಾಸಾ.1 ಮತ್ತು 1 ರಿಂದ 4ನೇ ಆರೋಪಿಗಳು ರಾಜಿ ಮಾಡಿಕೂಂಡಿರುತ್ತೇವೆ ಎಂದು ಒಪ್ಪಿಕೊಂಡಿದ್ದು, ರಾಜಿ ಮಾಡಿಕೊಂಡಿರುವ ಕಾರಣ ಆರೋಪಿತರು ತನ್ನ ಮೇಲೆ ಹಲ್ಲೆ ಮಾಡಿದ್ದರೂ ಸಹ ಹಲ್ಲೆ ಮಾಡಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂಬ ಸಲಹೆಯನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ.

**12.** ಅಭಿಯೋಜನೆಗೆ 1 ರಿಂದ 4ನೇ ಆರೋಪಿಗಳ ವಿರುದ್ಧ ಮಾಡಿದ ಆರೋಪಗಳನ್ನು ನಿಸ್ಸಂಶಯವಾಗಿ ಸಾಬೀತುಪಡಿಸಲು ದೂರುದಾರರು ಮತ್ತು ನೊಂದ ವ್ಯಕ್ತಿಯಾದ ಪ್ರಾಸಾ 1 ರವರ ಸಾಕ್ಷ್ಯವು ಬಹಳ ಪ್ರಮುಖವಾಗಿರುತ್ತದೆ. ಪ್ರಾಸಾ 1 ರವರು ಅಭಿಯೋಜನೆ ಪ್ರಕರಣಕ್ಕೆ ಪೂರಕವಾಗಿ ಮತ್ತು ನಿಪಿ.1 ಮತ್ತು 2 ಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿದಿರುವುದಿಲ್ಲ. ಅಲ್ಲದೇ ಅಭಿಯೋಜನೆಯ ಪಾಟೀ ಸವಾಲಿನಲ್ಲಿ ಪ್ರಾಸಾ.1 ರವರಿಗೆ 1ನೇ ಆರೋಪಿಯು ಚಾಸಾ 4 ರವರನ್ನು ತಳ್ಳಿ ತನ್ನನ್ನು ಕಛೇರಿಯ ಒಳಗೆ ಎಳೆದುಕೊಂಡು ಹೋದರು, ಅವಾಚ್ಯ ಶಬ್ದಗಳಿಂದ ಬೈದು ಕೈಯಿಂದ ಗುದ್ದಿದನು, 2ನೇ ಆರೋಪಿಯು ಪೆನ್ ಸ್ಟ್ಯಾಂಡ್ ನಿಂದ ತನ್ನ ಬಲಕಿವಿಗೆ ಹೊಡೆದನು, 1ನೇ ಆರೋಪಿಯು ಫೋಟೋ ಫ್ರೇಮ್ ತೆಗೆದುಕೊಂಡು ತನ್ನ ಮುಖದ ಮೇಲೆ

ಹೊಡೆದು, 3 ಮತ್ತು 4ನೇ ಆರೋಪಿತರು ತನಗೆ ಕೈಯಿಂದ ಹಲ್ಲೆ ಮಾಡಿ, ಕಾಲಿನಿಂದ ಒದ್ದರು, ಬಿಡಿಸಲು ಬಂದ ಚಾಸಾ 4 ರವರಿಗೆ 3 ಮತ್ತು 4ನೇ ಆರೋಪಿತರು ಅಡ್ಡಗಟ್ಟಿ ಹಿಡಿದುಕೊಂಡು, ಈ ಘಟನೆಯಿಂದ ತನ್ನ ಮೇಲ್ಬಾಗದ ಹಲ್ಲು ಮುರಿದಿರುತ್ತದೆ ಎಂಬ ಸಲಹೆಗಳನ್ನು ಅಲ್ಲಗಳೆದಿದ್ದು, ಪ್ರಾಸಾ 1 ಮತ್ತು 1 ರಿಂದ 4ನೇ ಆರೋಪಿಗಳು ರಾಜಿ ಮಾಡಿಕೊಂಡಿರುತ್ತೇವೆ ಎಂಬ ಸಲಹೆಯನ್ನು ಒಪ್ಪಿಕೊಂಡಿದ್ದು, ರಾಜಿ ಮಾಡಿಕೊಂಡಿರುವ ಕಾರಣ ಸುಳ್ಳು ಸಾಕ್ಷಿ ಹೇಳುತ್ತಿದ್ದೇವೆ ಎಂಬ ಸಲಹೆಯನ್ನು ಸಂಪೂರ್ಣವಾಗಿ ಅಲ್ಲಗಳೆದು ಅಭಿಯೋಜನೆ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ.

**13.** ಅಭಿಯೋಜನೆಯೂ ಸಹ 1 ರಿಂದ 4ನೇ ಆರೋಪಿಗಳ ವಿರುದ್ಧ ಆರೋಪಿಸಲಾದ ಆರೋಪವನ್ನು ಪುಷ್ಟೀಕರಿಸುವಂತಹ ಯಾವುದೇ ಮೌಖಿಕ ಅಥವಾ ಲಿಖಿತ ಸಾಕ್ಷ್ಯಾಧಾರಗಳನ್ನು ಪೂರೈಸಿರುವುದಿಲ್ಲ. ಹೀಗಾಗಿ ಅಭಿಯೋಜನೆಯು 1 ರಿಂದ 4ನೇ ಆರೋಪಿಗಳ ವಿರುದ್ಧ ಆರೋಪಿಸಲಾದ ಆರೋಪಗಳನ್ನು ನಿಸ್ಸಂಶಯವಾಗಿ ಸಾಬೀತುಪಡಿಸಲು ವಿಫಲವಾಗಿದೆ. ಆದಕಾರಣ, ಕಾನೂನಿನಲ್ಲಿ ಇತ್ಯರ್ಥವಾದ ತತ್ವಗಳ ಪ್ರಕಾರ 1 ರಿಂದ 4ನೇ ಆರೋಪಿಗಳಿಗೆ ಸಂಶಯದ ಲಾಭ ನೀಡಿ, ಮೇಲಿನ ಅಂಶವನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.

**14. ಅಂಶ.5**: ಮೇಲೆ ಹೇಳಿದ ಕಾರಣಗಳು ಮತ್ತು ಮೇಲಿನ ಅಂಶಗಳಿಗೆ ನೀಡಿದ ಉತ್ತರದಿಂದಾಗಿ, ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದ ಮೇರೆಗೆ 1 ರಿಂದ 4ನೇ ಆರೋಪಿಗಳ ವಿರುದ್ಧ ಆರೋಪಿಸಲಾದ ಕಲಂ 118(2), 115(2), 126, 352, 3(5) ಬಿಎನ್‌ಎಸ್ ರಡಿ ಅಪರಾಧಗಳಿಂದ ದೋಷಮುಕ್ತಗೊಳಿಸಿ ಬಿಡುಗಡೆ ಮಾಡಿದೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ)ರ ಪ್ರಕಾರ 1 ರಿಂದ 4ನೇ ಆರೋಪಿಗಳು ಬರೆದು ಕೊಟ್ಟಿರುವ ಜಾಮೀನು ಮುಚ್ಚಳಿಕೆಯು ಆರು ತಿಂಗಳುಗಳ ನಂತರ ರದ್ದುಗೊಳ್ಳತಕ್ಕದ್ದು.

(ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರಕ್ಕೆ ಅಳವಡಿಸುವಂತೆ ಉಕ್ತಲೇಖನ ಕೊಟ್ಟಿದ್ದು ಅವರು ಅದನ್ನು ಗಣಕಯಂತ್ರಕ್ಕೆ ಅಳವಡಿಸಿ, ತೆಗೆದುಕೊಟ್ಟ ತೀರ್ಪನ್ನು ಓದಿ, ತಿದ್ದುಪಡಿ ಮಾಡಿ ದಿಃ 10.03.2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ)

RANGEGOWDA CHIDANANDA

Digitally signed by RANGEGOWDA CHIDANANDA
Date: 2026.03.16 16:37:50 +0530

**(ರಂಗೇಗೌಡ.ಸಿ)**
**ಮುಖ್ಯ ನ್ಯಾಯಿಕ ದಂಡಾಧಿಕಾರಿ,**
**ಬೆಂಗಳೂರು ನಗರ**

# ಅ ನು ಬಂ ಧ

**ಅಭಿಯೋಜನೆ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಃ**

ಫ್ರಾಸಾ 1 – ಸುಧಾಕರ್ ಬಿನ್ ಲೇ ರಾಮಪ್ಪ

**ಅಭಿಯೋಜನೆ ಪರ ಗುರುತಿಸಲಾದ ನಿಶಾನೆಃ**

| | |
|---|---|
| ನಿಪಿ 1 | – ದೂರು |
| ನಿಪಿ 1 (ಎ) | – ಫ್ರಾಸಾ 1 ರವರ ಸಹಿ |
| ನಿಪಿ 2 | – ಸ್ಥಳ ಪಂಚನಾಮೆ |
| ನಿಪಿ 2(ಎ) | – ಫ್ರಾಸಾ 1 ರವರ ಸಹಿ |
| ನಿಪಿ 3 | – ಫ್ರಾಸಾ 1 ರವರ ಮರು ಹೇಳಿಕೆ |

**ಅಭಿಯೋಜನೆ ಪರ ಗುರುತಿಸಲಾದ ಮುದ್ದೆ ಮಾಲುಃ**

ಇಲ್ಲ

**ಆರೋಪಿ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಃ**

ಇಲ್ಲ

**ಆರೋಪಿ ಪರ ಗುರುತಿಸಲಾದ ನಿಶಾನೆಃ**

ಇಲ್ಲ

**ಮುಖ್ಯ ನ್ಯಾಯಿಕ ದಂಡಾಧಿಕಾರಿ,**
**ಬೆಂಗಳೂರು ನಗರ.**

10.03.2026

ಪ್ರತ್ಯೇಕವಾಗಿ ತಯಾರಿಸಲಾದ ತೀರ್ಪನ್ನು
ಘೋಷಿಸಿದ್ದು ಅಂತಿಮ ಆದೇಶ ಈ ಕೆಳಕಂಡಂತಿರುತ್ತದೆ.

**ಆದೇಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದ ಮೇರೆಗೆ 1 ರಿಂದ 4ನೇ ಆರೋಪಿಗಳ ವಿರುದ್ಧ ಆರೋಪಿಸಲಾದ ಕಲಂ 118(2), 115(2), 126, 352, 3(5) ಬಿಎನ್‌ಎಸ್ ರಡಿ ಅಪರಾಧಗಳಿಂದ ದೋಷಮುಕ್ತಗೊಳಿಸಿ ಬಿಡುಗಡೆ ಮಾಡಿದೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ)ರ ಪ್ರಕಾರ 1 ರಿಂದ 4ನೇ ಆರೋಪಿಗಳು ಬರೆದು ಕೊಟ್ಟಿರುವ ಜಾಮೀನು ಮುಚ್ಚಳಿಕೆಯು ಆರು ತಿಂಗಳುಗಳ ನಂತರ ರದ್ದುಗೊಳ್ಳತಕ್ಕದ್ದು.

**ಮುಖ್ಯ ನ್ಯಾಯಿಕ ದಂಡಾಧಿಕಾರಿ,**
**ಬೆಂಗಳೂರು ನಗರ**